

بسم اللهِ الرّحمٰن الرّحيم

# ರಮಝಾನ್ – ಪ್ರಾರ್ಥನೆಗಳನ್ನು ಸ್ವೀಕರಿಸುವ ವಿಶೇಷ ಸಮಯ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **29-03-2024** ರಂದು ನೀಡಿದ **ಜುಮುಆ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ. بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಪವಿತ್ರ ಖುರ್‌ಆನಿನ ಈ ವಚನ ತಿಲಾವತ್ ಮಾಡಿದರು:)*

وَإِذَا سَأَلَكَ عِبَادِيْ عَنِّيْ فَإِنِّيْ قَرِيْبٌ ۖ أُجِيْبُ دَعْوَةَ الدَّاعِ إِذَا دَعَانِ ۖ فَلْيَسْتَجِيْبُوْا لِيْ وَلْيُؤْمِنُوْا بِيْ لَعَلَّهُمْ يَرْشُدُوْنَ ﴿١٨٧﴾

ಅರ್ಥ: (ಎಲೈ ಪ್ರವಾದಿ,) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು) – ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ. (2:187).

ಅಲ್ಲಾಹನು ಈ ವಚನವನ್ನು ವ್ರತಾನುಷ್ಠಾನದ ಆದೇಶದ ಮಧ್ಯೆ ಇರಿಸಿದ್ದಾನೆ. ರಮಝಾನಿಗೆ ಪ್ರಾರ್ಥನೆಯೊಂದಿಗೆ ವಿಶಿಷ್ಟವಾದ ಸಂಬಂಧವಿದೆ ಎಂದು ಇದರಿಂದ ಗೊತ್ತಾಗುತ್ತದೆ. ರಮಝಾನಿನಲ್ಲಿ ಅಲ್ಲಾಹನ ಒಂದು ವಿಶೇಷವಾದ ಪ್ರೀತಿಯ ಗಮನ ದಾಸನ ಮೇಲೆ ಇರುತ್ತದೆ. ಸಾಮಾನ್ಯ ದಿನಗಳಲ್ಲೂ ಅಲ್ಲಾಹನ ಪ್ರೀತಿಯ ನೋಟ ತನ್ನ ದಾಸರ ಮೇಲೆ ಇರುತ್ತದೆ. ಹಝ್ರತ್ ಪೈಗಂಬರ್[ಸ] ನುಡಿಯುತ್ತಾರೆ – ಅಲ್ಲಾಹನು ಹೇಳುತ್ತಾನೆ: ನಾನು ನನ್ನ ದಾಸನ ಊಹೆಗೆ ಅನುಸಾರ ಅವನೊಂದಿಗೆ ವರ್ತಿಸುತ್ತೇನೆ. ನನ್ನ ದಾಸನು ನನ್ನನ್ನು ಸ್ಮರಿಸುವಾಗ ನಾನು ಅವನ ಜೊತೆಗೆ ಇರುತ್ತೇನೆ. ಅವನು ನನ್ನನ್ನು ಮನಸ್ಸಿನಲ್ಲಿ ನೆನಪಿಸುವಾಗ, ನಾನು ಮನಸ್ಸಿನಲ್ಲಿ ಅವನನ್ನು ನೆನಪಿಸುತ್ತೇನೆ..... ಅವನು ನನ್ನ ಬಳಿಗೆ ನಡೆದು ಬಂದರೆ, ನಾನು ಅವನ ಬಳಿಗೆ ಓಡಿ ಹೋಗುವೆನು. ಒಟ್ಟಿನಲ್ಲಿ, ಅಲ್ಲಾಹನು ಸಾಮಾನ್ಯ ಅವಸ್ಥೆಯಲ್ಲೂ ದಾಸನೊಂದಿಗೆ ಹೀಗೆ ವರ್ತಿಸುವಾಗ ರಮಝಾನಿನಲ್ಲಿ ಅವನು ಎಷ್ಟು ಕಾರುಣ್ಯವಂತನು ಆಗಿರಬಹುದು ಎಂಬುದನ್ನು ನಮಗೆ ಊಹಿಸಲು ಕೂಡ ಸಾಧ್ಯವಲ್ಲ. ಆದರೆ ಎಲ್ಲವೂ ಮನಸ್ಸಾರೆ ಮತ್ತು ಹೃದಯದ ಅಂತರಾಳದಿಂದ ಆಗಿರಬೇಕು ಎಂಬುದಾಗಿದೆ ನಿಬಂಧನೆ.

ಹಝ್ರತ್ ಪೈಗಂಬರ್[ಸ] ಹೇಳುತ್ತಾರೆ: ಅಲ್ಲಾಹನು ಬಹಳ ಲಜ್ಜೆಯುಳ್ಳವನೂ ದಯಾವಂತನೂ ಉದಾರಿಯೂ ಆಗಿದ್ದಾನೆ. ದಾಸನು ತನ್ನ ಎರಡು ಕೈಗಳನ್ನೂ ಅಲ್ಲಾಹನ ಕಡೆಗೆ ಎತ್ತುವಾಗ ಅವನ್ನು ಖಾಲಿಯಾಗಿ ಮತ್ತು ನಿಷ್ಪ್ರಯೋಜಕವಾಗಿ ಮರಳಿಸಲು ಅಲ್ಲಾಹನು ಇಷ್ಟಪಡುವುದಿಲ್ಲ. 'ನಾವು ದುಆ ಮಾಡಿದೆವು ಆದರೆ ದುಆ ಸ್ವೀಕೃತಗೊಳ್ಳಲಿಲ್ಲ' ಎಂದು ನಾವು ಕೆಲವೊಮ್ಮೆ ದುಡುಕಿನಲ್ಲಿ ಹೇಳುತ್ತೇವೆ. ಆದರೆ ಎಷ್ಟರ ಮಟ್ಟಿಗೆ ಶುದ್ಧ ಹೃದಯದಿಂದ ಇದ್ದೇವೆ ಎಂದು ನಾವು ನಮ್ಮ ಸ್ಥಿತಿಯ ಬಗ್ಗೆ ನೋಡುವುದಿಲ್ಲ. ಅಲ್ಲಾಹನನ್ನು ಮೋಸಗೊಳಿಸಲು ಸಾಧ್ಯವಲ್ಲ. ಅವನು ನಮ್ಮ ಹೃದಯದ ಸ್ಥಿತಿಯನ್ನು ಅರಿಯುತ್ತಾನೆ. ಅಲ್ಲಾಹನ ತೆರದ ಮನೆಯನ್ನು ಪ್ರವೇಶಿಸಲು ಅದರ ನಿಬಂಧನೆಗಳನ್ನು ಪೂರೈಸಬೇಕಾಗುವುದು. ಈ ವಚನದಲ್ಲಿ 'ನನ್ನ ದಾಸ' ಎಂಬ ಪ್ರಯೋಗದ ಅರ್ಥ, ನಿಜವಾಗಿಯೂ ಅಲ್ಲಾಹನ ದಾಸನಾಗಲು ಬಯಸುವ ದಾಸರು ಎಂದಾಗಿದೆ. ದಾಸನಾಗಲು ರಮಝಾನಿನಲ್ಲಿ ಪ್ರತ್ಯೇಕವಾದ ವಾತಾವರಣ ಇರುತ್ತದೆ. ಈ ವಾತಾವರಣದಿಂದ ಪ್ರಯೋಜನ ಪಡೆದು ಅಂತಹ ಸ್ಥಿತಿ ಉಂಟುಮಾಡಿದರೆ, ಅಂತಹ ನನ್ನ ದಾಸರೊಡನೆ ಮತ್ತು ನನ್ನನ್ನು ಪ್ರೀತಿಸುವವರೊಡನೆ "ನಾನು ದುಆಗಳನ್ನು ಆಲಿಸುತ್ತೇನೆ ಮತ್ತು ಅವುಗಳಿಗೆ ಉತ್ತರಿಸುತ್ತೇನೆ ಎಂದು ತಿಳಿಸು" ಎಂದು ಅಲ್ಲಾಹನು ಹೇಳುತ್ತಾನೆ. ಪ್ರೀತಿಸುವುದಾಗಿ ಕೇವಲ ನಾಲಗೆಯಿಂದ ಹೇಳುವುದು ಸಾಕಾಗುವುದಿಲ್ಲ. ಬದಲಾಗಿ ನನ್ನ ಆಜ್ಞೆಗಳನ್ನು ನೀವು ಪಾಲಿಸಬೇಕು ಎಂದು ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ. ಅಲ್ಲಾಹನಿಗೆ ಸಂಬಂಧಪಟ್ಟ ಹಕ್ಕುಗಳನ್ನು ಮತ್ತು ದಾಸರಿಗೆ ಸಂಬಂಧಪಟ್ಟ ಹಕ್ಕುಗಳನ್ನು ಈಡೇರಿಸಬೇಕು ಹಾಗೂ ವಿಶ್ವಾಸವನ್ನು ಸುದೃಢಗೊಳಿಸಬೇಕಾಗುವುದು.

ದುಆದ ನೈಜತೆ, ಯುಕ್ತಿ, ಸ್ವೀಕಾರ ಮತ್ತು ತತ್ವವನ್ನು ಹಝ್ರತ್ ಮಸೀಹ್ ಮೌಊದ್[ಅ] ಬಹಳ ವಿಶದವಾಗಿ ವಿವರಿಸಿದ್ದಾರೆ. ಅವರು ಹೇಳುತ್ತಾರೆ: ಅಲ್ಲಾಹನ ಅಸ್ತಿತ್ವಕ್ಕೆ ಇರುವ ಪುರಾವೆಯೇನು? ಅದರ ಉತ್ತರವೇನೆಂದರೆ, ಅವನು ಬಹಳ ಸಮೀಪದಲ್ಲಿದ್ದಾನೆ. ದೊಡ್ಡ ಪುರಾವೆಗಳ ಅಗತ್ಯವಿಲ್ಲ. ನನ್ನ ಅಸ್ತಿತ್ವವನ್ನು ಬಹಳ ಸುಲಭವಾಗಿ ಮನವರಿಕೆ ಮಾಡಬಹುದಾಗಿದೆ. ಆ ಪುರಾವೆಯೇನೆಂದರೆ, ಪ್ರಾರ್ಥಿಸುವವನು ನನ್ನನ್ನು ಕರೆದರೆ ನಾನು ಅವನ ಕರೆಯನ್ನು ಆಲಿಸುತ್ತೇನೆ. ಮತ್ತೊಂದೆಡೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅಲ್ಲಾಹನ ಅಸ್ತಿತ್ವವನ್ನು ಹೇಗೆ ಗೊತ್ತುಮಾಡಬಹುದು ಎಂದು ಯಾರಾದರೂ ಪ್ರಶ್ನಿಸುವುದಾದರೆ ಅದರ ಉತ್ತರ, ಇಸ್ಲಾಮಿನ ದೇವ ಬಹಳ ಸಮೀಪದಲ್ಲಿದ್ದಾನೆ ಎಂದಾಗಿದೆ. ಯಾರಾದರೂ ಅವನನ್ನು ಪ್ರಾಮಾಣಿಕನಾಗಿ ಕರೆದರೆ ಅವನು ಉತ್ತರಿಸುತ್ತಾನೆ. ಇತರ ಧರ್ಮಗಳ ದೇವರು ಸಮೀಪದಲ್ಲಿಲ್ಲ. ಪತ್ತೆ ಕೂಡ ಇಲ್ಲದ ರೀತಿಯಲ್ಲಿ ಅವರು ದೂರದಲ್ಲಿದ್ದಾರೆ. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನಾವು ಕರೆದರೂ ಉತ್ತರ ಲಭಿಸುವುದಿಲ್ಲ ಎಂದು ಯಾರಾದರೂ ಹೇಳುವುದಾದರೆ, ನೋಡಿರಿ, ನೀವು ಒಂದೆಡೆ ನಿಂತುಕೊಂಡು ನಿಮ್ಮಿಂದ ಬಹಳ ದೂರದಲ್ಲಿರುವ ವ್ಯಕ್ತಿಯನ್ನು ಕರೆದರೆ, ಅವನು ಅದಕ್ಕೆ ಉತ್ತರ ನೀಡಿದರೂ ಕೂಡ ನಿಮ್ಮ ಕಿವಿಯಲ್ಲಿ ಏನಾದರೂ ಕೊರತೆಯಿದ್ದರೆ ಅದನ್ನು ಆಲಿಸಲು ನಿಮ್ಮಿಂದ ಸಾಧ್ಯವಲ್ಲ. ಅದೇ ರೀತಿಯಲ್ಲಿ ಅಲ್ಲಾಹನು ನಿಮ್ಮ ಕರೆಗೆ ಉತ್ತರಿಸಿದರೂ ಕೂಡ, ನಿಮ್ಮ ವಿಶ್ವಾಸ ಸುದೃಢವಾಗಿರದ ಕಾರಣದಿಂದ, ನಿಮ್ಮ ಪ್ರೀತಿಯಲ್ಲಿ ಕೊರತೆ ಇರುವ ಕಾರಣದಿಂದ, ಅಲ್ಲಾಹನ ಆದೇಶಗಳನ್ನು ಪಾಲಿಸದೇ

ಇರುವ ಕಾರಣದಿಂದ, ಈ ಎಲ್ಲ ರೀತಿಯ ಕಿವುಡತನದ ಕಾರಣದಿಂದ ನೀವು ಅಲ್ಲಾಹನ ಶಬ್ದವನ್ನು ಆಲಿಸಲಾರಿರಿ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಪ್ರಾರ್ಥನೆಯು ಅಲ್ಲಾಹನ ಅಸ್ತಿತ್ವಕ್ಕೆ ಇರುವ ಬಹಳ ದೊಡ್ಡ ಪುರಾವೆಯಾಗಿದೆ. ದುಆ ಬಹಳ ದೊಡ್ಡ ಸಂಪತ್ತು ಮತ್ತು ಶಕ್ತಿಯಾಗಿದೆ. ಪ್ರವಾದಿಗಳ ಜೀವಿತದ ಬೇರು ಮತ್ತು ಅವರ ವಿಜಯದ ಕಾರಣ ಹಾಗೂ ನಿಜವಾದ ಮಾರ್ಗ ಇದೇ ದುಆ ಆಗಿದೆ. ನಾನು ಉಪದೇಶಿಸುವುದೇನೆಂದರೆ, ನಿಮ್ಮ ವಿಶ್ವಾಸಪರವಾದ ಮತ್ತು ಕರ್ಮಪರವಾದ ಶಕ್ತಿಯನ್ನು ವರ್ಧಿಸಲು ದುಆ ಮಾಡುವುದರಲ್ಲಿ ನಿರತರಾಗಿರಿ. ದುಆಗಳ ಮೂಲಕ ಎಂತಹ ಬದಲಾವಣೆ ಉಂಟಾಗುವುದು ಎಂದರೆ, ನಿಮ್ಮ ಅಂತ್ಯ ಶುಭಕರವಾಗುವುದು. ದೇವನ ಬಗ್ಗೆಗಿನ ಪರಿಜ್ಞಾನದ ಕುರಿತು ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅಲ್ಲಾಹನ ಬಗ್ಗೆಗಿನ ಪರಿಜ್ಞಾನ ಅಲ್ಲಾಹನ ಕೃಪೆಯಿಂದ ಲಭಿಸುತ್ತದೆ ಹಾಗೂ ಅಲ್ಲಾಹನ ಕೃಪೆಯಿಂದಲೇ ಅದು ಬಾಕಿಯುಳಿಯುತ್ತದೆ. ಅಲ್ಲಾಹನ ಕೃಪೆಯು ಅಲ್ಲಾಹನ ಬಗ್ಗೆಗಿನ ಅರಿವನ್ನು ಅತ್ಯಂತ ಸ್ವಚ್ಛ ಮತ್ತು ಪ್ರಕಾಶಭರಿತವನ್ನಾಗಿ ಮಾಡುತ್ತದೆ. ನಾವು ಪ್ರತಿದಿನ ದುಆ ಮಾಡುತ್ತಿದ್ದೇವೆ ಮತ್ತು ನಮಾಝ್ ಸಂಪೂರ್ಣ ದುಆವೇ ಅಲ್ಲವೇ ಎಂದು ಭಾವಿಸಬೇಡಿರಿ. ಏಕೆಂದರೆ ಅಲ್ಲಾಹನ ಬಗ್ಗೆಗಿನ ಅರಿವು ಮತ್ತು ಅಲ್ಲಾಹನ ಕೃಪೆಯ ಮೂಲಕ ಮಾಡುವ ಪ್ರಾರ್ಥನೆಯು ಬೇರೆಯೇ ಬಣ್ಣವನ್ನು ಮತ್ತು ಬೇರೆಯೇ ಅವಸ್ಥೆಯನ್ನು ಹೊಂದಿರುತ್ತದೆ. ಅದು ಲೀನವಾಗಿಸುವ ಸಂಗತಿಯಾಗಿದೆ. ಅದು ಕರಗಿಸುವ ಬೆಂಕಿಯಾಗಿದೆ. ಅದು ಕಾರುಣ್ಯವನ್ನು ಸೆಳೆಯುವ ಕಾಂತೀಯ ಶಕ್ತಿಯಾಗಿದೆ. ಅದೊಂದು ಮರಣವಾಗಿದೆ. ಆದರೆ ಅದು ಕೊನೆಗೆ ಜೀವಂತಗೊಳಿಸುತ್ತದೆ. ದುಆ ಮಾಡುವ ಸೌಭಾಗ್ಯ ಅಲ್ಲಾಹನಿಂದ ಲಭಿಸುತ್ತದೆ ಮತ್ತು ಅಲ್ಲಾಹನ ಬಳಿಗೇ ಹೋಗುತ್ತದೆ. ನಿಮ್ಮ ಜೀವ ನಿಮ್ಮ ಸಮೀಪವಿರುವ ಹಾಗೆಯೇ ದುಆದಿಂದ ಅಲ್ಲಾಹನು ಸಮೀಪನಾಗುತ್ತಾನೆ. ಸೃಷ್ಟಿಗಳ ಒಳಿತಿಗಾಗಿ ಅತ್ಯುನ್ನತನಾದ ಅಲ್ಲಾಹನು ತೆರೆದಿರುವ ಒಂದೇ ಬಾಗಿಲು ದುಆ ಆಗಿದೆ. ವ್ಯಕ್ತಿಯೊಬ್ಬನು ಅಳುತ್ತಾ ಆ ಬಾಗಿಲನ್ನು ಪ್ರವೇಶಿಸುವಾಗ ಕೃಪಾಳುವಾದ ಅಲ್ಲಾಹನು ಆತನಿಗೆ ಪರಿಶುದ್ಧಿಯ ಚಾದರವನ್ನು ಹೊದಿಸುತ್ತಾನೆ ಮತ್ತು ತನ್ನ ಮಹಿಮೆಯನ್ನು ಎಷ್ಟು ಅಧಿಕವಾಗಿ ತೋರಿಸುತ್ತಾನೆ ಎಂದರೆ ಆತನು ವ್ಯರ್ಥವಾದ ಕೆಲಸಗಳಿಂದ ಮತ್ತು ನಿರುಪಯುಕ್ತ ಕೃತ್ಯಗಳಿಂದ ಮೈಲುಗಟ್ಟಲೆ ದೂರವಾಗುತ್ತಾನೆ.

(ಹುಝೂರ್ ಹೇಳಿದರು:) ಅಂತಹ ವ್ಯಕ್ತಿ ಲೌಕಿಕ ಕಾರ್ಯಗಳಿಗಾಗಿ ಮಾತ್ರ ದುಆ ಮಾಡುವುದಿಲ್ಲ. ಬದಲಾಗಿ ತಖ್ವ ಮತ್ತು ಪರಿಶುದ್ಧಿಯನ್ನು ಗಳಿಸಲಿಕ್ಕಾಗಿ ದುಆ ಮಾಡುತ್ತಾನೆ. ಇದೇ ಸತ್ಯವಿಶ್ವಾಸಿಯ ಲಕ್ಷಣವಾಗಿದೆ. ದುಆದ ಆಳವನ್ನು ಇನ್ನಷ್ಟು ಸ್ಪಷ್ಟಪಡಿಸುತ್ತಾ ಒಂದೆಡೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅಲ್ಲಾಹನ ಕೃಪೆಯನ್ನು ಗಳಿಸಲು ಅತ್ಯಂತ ಸಮೀಪ ಮಾರ್ಗ ದುಆ ಆಗಿದೆ. ಪರಿಪೂರ್ಣ ದುಆದ ನಿಬಂಧನೆ ಏನೆಂದರೆ, ಅದರಲ್ಲಿ ನಮ್ರತೆ, ಕಳವಳ, ಕರಗುವಿಕೆ ಇರಬೇಕು. ವಿನಯ, ಬೇಗುದಿ ಮತ್ತು ನೋವಿನಿಂದ ಕೂಡಿದ ದುಆ ಅಲ್ಲಾಹನ ಕೃಪೆಯನ್ನು ಸೆಳೆಯುತ್ತದೆ. ಇದು ಕೂಡ ಅಲ್ಲಾಹನ ಕೃಪೆಯಿಲ್ಲದೇ ಲಭಿಸದು. ಇದಕ್ಕಿರುವ ಚಿಕಿತ್ಸೆ ಏನೆಂದರೆ, ಮನಸ್ಸಿಲ್ಲದ ಮತ್ತು ಆಸಕ್ತಿ ಇಲ್ಲದ ಸ್ಥಿತಿಯಲ್ಲೂ ದುಆ ಮಾಡುತ್ತಾ ಇರಬೇಕು. "ಹೇ ಅಲ್ಲಾಹ್, ಹೃದಯ ನಿನ್ನದೇ ನಿಯಂತ್ರಣದಲ್ಲಿದೆ, ನೀನು ಅದನ್ನು ಪರಿಶುದ್ಧಗೊಳಿಸು" ಎಂದು ಒಬ್ಬನು ಶ್ರದ್ಧೆ ಮತ್ತು ತಾಳ್ಮೆಯಿಲ್ಲದ ಸ್ಥಿತಿಯಲ್ಲೂ ರಾತ್ರಿ ಸಮಯದಲ್ಲಿ ಎದ್ದು ದುಆ ಮಾಡುವುದಾದರೆ ಮತ್ತು ಹೃದಯ ಸಂಕುಚಿತಗೊಂಡಿರುವ ಸ್ಥಿತಿಯಲ್ಲೂ ಅದು ವಿಶಾಲಗೊಳ್ಳಬೇಕು ಎಂದು ಬಯಸುವುದಾದರೆ, ಆ ಸಂಕುಚಿತ ಅವಸ್ಥೆಯಿಂದಲೂ ವಿಶಾಲತೆ ಹೊರಹೊಮ್ಮುವುದು ಮತ್ತು ನಮ್ರತೆ ಉಂಟಾಗುವುದು. ಆಗ ಅವನ ಆತ್ಮ ಅಲ್ಲಾಹನ ಸನ್ನಿಧಿಯಲ್ಲಿ ನೀರಿನ ಹಾಗೆ ಹರಿಯುವುದನ್ನು ಅವನು ನೋಡುವನು. ದುಆ ಎಂತಹ ಸಂಗತಿ ಆಗಿದೆ ಎಂದರೆ, ಅದು ಪ್ರತಿಯೊಂದು ಕಷ್ಟತೆಯನ್ನು ಸುಲಭಗೊಳಿಸುತ್ತದೆ. ಜನರಿಗೆ ದುಆದ ಮೌಲ್ಯ ಮತ್ತು ಬೆಲೆ ಗೊತ್ತಿಲ್ಲ. ಮನುಷ್ಯನು ಬೇಗನೇ ನಿರಾಶೆಗೊಳ್ಳುತ್ತಾನೆ ಮತ್ತು ಧೈರ್ಯಗುಂದಿ ಪ್ರಯತ್ನವನ್ನು ಬಿಟ್ಟು ಬಿಡುತ್ತಾನೆ. ಆದರೆ ದುಆಗಾಗಿ ಒಂದು ಸ್ಥಿರಚಿತ್ತತೆ ಮತ್ತು ನಿರಂತರತೆಯ ಅಗತ್ಯವಿದೆ. ಅದಕ್ಕಿರುವ ನಿಬಂಧನೆ ನಿಷ್ಠೆ ಮತ್ತು ಪರಿಶ್ರಮವಾಗಿದೆ. ಅವು ಕೂಡ ದುಆದಿಂದ ಉಂಟಾಗುತ್ತದೆ.

(ಹುಝೂರ್ ಹೇಳಿದರು:) ಅದಕ್ಕಾಗಿ ನಾವು ನಮ್ಮ ಹೃದಯಗಳನ್ನು ಪರೀಕ್ಷಿಸಬೇಕಾಗುವುದು. ಈ ನಿಷ್ಠಾವಂತಿಕೆ ಮತ್ತು ಪರಿಶ್ರಮದ ಸ್ಥಿತಿ ನಮ್ಮಲ್ಲಿ ಇದೆಯೇ ಅಥವಾ ಉಂಟುಮಾಡಲು ಪ್ರಯತ್ನಿಸುತ್ತಿದ್ದೇವೆಯೇ ಎಂದು ನೋಡಬೇಕು. ದುಆದ ತತ್ವವನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಈ ಜೀವಿತವು ಬಹಳ ತುಚ್ಛವಾದುದಾಗಿದೆ ಎಂದು ಅರಿತುಕೊಂಡು ಅದರಿಂದ ಹೊರಗೆ ಬರಲು ಮನುಷ್ಯನು ಪ್ರಯತ್ನಿಸಬೇಕು ಮತ್ತು ದುಆವನ್ನು ಮಾಡಬೇಕು. ಏಕೆಂದರೆ ಮನುಷ್ಯನು ಮಾಡಬೇಕಾದ ಪ್ರಯತ್ನವನ್ನು ಮಾಡಿದ ನಂತರ ನೈಜವಾಗಿ ದುಆಗಳನ್ನು ಮಾಡಿದರೆ ಕೊನೆಗೆ ಅಲ್ಲಾಹನು ಆತನಿಗೆ ಮೋಕ್ಷವನ್ನು ನೀಡುತ್ತಾನೆ. ಆತನು ಪಾಪಕರವಾದ ಜೀವಿತದಿಂದ ಹೊರಗೆ ಬರುತ್ತಾನೆ. ಏಕೆಂದರೆ ದುಆ ಕೂಡ ಸಾಮಾನ್ಯ ಸಂಗತಿಯಲ್ಲ. ಬದಲಾಗಿ ಅದು ಒಂದು ಮರಣವಾಗಿದೆ. ಮನುಷ್ಯನು ಈ ಒಂದು ಮರಣವನ್ನು ಸ್ವೀಕಾರ ಮಾಡುವಾಗ ಅಲ್ಲಾಹನು ಆತನನ್ನು ಮರಣಕ್ಕೆ ಕಾರಣವಾಗುವಂತಹ ಪಾಪಕರವಾದ ಜೀವನದಿಂದ ರಕ್ಷಿಸುತ್ತಾನೆ ಮತ್ತು ಆತನಿಗೆ ಒಂದು ಪರಿಶುದ್ಧವಾದ ಜೀವಿತವನ್ನು ದಯಪಾಲಿಸುತ್ತಾನೆ. ಆದ್ದರಿಂದ ರಾತ್ರಿ ಸಮಯದಲ್ಲಿ ಏಳುತ್ತಾ ಅತ್ಯಂತ ವಿನಮ್ರತೆ, ಅಳಲು ಮತ್ತು ತ್ಯಾಗ ಮನೋಭಾವದಿಂದ ಅಲ್ಲಾಹನ ಸನ್ನಿಧಿಯಲ್ಲಿ ತಮ್ಮ ಕಷ್ಟತೆಗಳನ್ನು ಮುಂದಿರಿಸಿರಿ. ಒಂದು ಮರಣದಂತಹ ಅವಸ್ಥೆ ಉಂಟಾಗುವ ಮಟ್ಟಕ್ಕೆ ದುಆವನ್ನು ಮಾಡಿರಿ. ಆಗ ಪ್ರಾರ್ಥನೆಯು ಸ್ವೀಕಾರದ ಪದವಿಗೆ ತಲುಪುವುದು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಇದನ್ನು ಕೂಡ ನೆನಪಿಡಿರಿ. ಮೊತ್ತಮೊದಲು ಮಾಡಬೇಕಾದ ಮತ್ತು ಮುಖ್ಯವಾದ ದುಆ ಏನೆಂದರೆ, ಮನುಷ್ಯನು ಸ್ವತಃ ಪಾಪಗಳಿಂದ ಮುಕ್ತನಾಗಿ ಪರಿಶುದ್ಧನಾಗಲು ದುಆ ಮಾಡಬೇಕು. ಎಲ್ಲ ದುಆಗಳ ಬೇರು ಮತ್ತು ಅವಿಭಾಗ್ಯ ಅಂಗ ಇದೇ ಆಗಿದೆ. ಏಕೆಂದರೆ ಈ ದುಆ ಸ್ವೀಕಾರಗೊಂಡರೆ, ಮನುಷ್ಯನು ಎಲ್ಲ ವಿಧಗಳ ಕೊಳಕು ಮತ್ತು ಮಾಲಿನ್ಯಗಳಿಂದ ಮುಕ್ತನಾಗಿ ಸ್ವಚ್ಛಗೊಂಡು ಅಲ್ಲಾಹನ ದೃಷ್ಟಿಯಲ್ಲಿ ಪರಿಶುದ್ಧನಾದರೆ, ಅವನ ಆವಶ್ಯಕತೆಗಳಿಗಾಗಿ ಅವನು ಇತರ ದುಆಗಳನ್ನು ಬೇಡಬೇಕಾದ ಅಗತ್ಯವೇ ಬರುವುದಿಲ್ಲ. ಅವು ಸ್ವತಃ ಈಡೇರುತ್ತವೆ. ದುಆ ಸ್ವೀಕಾರಗೊಳ್ಳಲು ಎಂತಹ ಅವಸ್ಥೆಯನ್ನು ಉಂಟುಮಾಡಬೇಕು ಎಂಬುದರ ಬಗ್ಗೆ ಹಝ್ರತ್ ಮಸೀಹ್

ಮೌಊದ್(ಅ) ಹೇಳುತ್ತಾರೆ: ಪ್ರಾರ್ಥನೆ ಮಾಡುವಾಗ ಅತ್ಯಂತ ಉನ್ನತ ಮಟ್ಟದ ಸಂಕಟದ ಸ್ಥಿತಿ ಉಂಟಾಗುವಾಗ ಪ್ರಾರ್ಥನೆಯಲ್ಲಿ ಸ್ವೀಕಾರದ ಪ್ರಭಾವ ಉಂಟಾಗುತ್ತದೆ. ಇದು ಸಣ್ಣ ಸಂಗತಿಯಲ್ಲ. ಬದಲಾಗಿ ಮಹತ್ತಾದ ಸತ್ಯವಾಗಿದೆ. ನಿಜವೇನೆಂದರೆ, ಅಲ್ಲಾಹನ ತೇಜಸ್ಸನ್ನು ನೋಡಲು ಬಯಸುವವನು ದುಆ ಮಾಡಬೇಕು. ಸ್ಥಿರಚಿತ್ತತೆಯಿಂದ ನಿರಂತರವಾಗಿ ದುಆ ಮಾಡುವುದರ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ದುಆ ಮಾಡುವಾಗ ನಿರಾಸಕ್ತಿ ತೋರಿಸಬಾರದು ಮತ್ತು ಗಾಬರಿಗೊಳ್ಳಬಾರದು. ಬೇಗನೇ ಆಯಾಸಗೊಂಡು ಕುಳಿತುಕೊಳ್ಳಬಾರದು. ಬದಲಾಗಿ ಎಲ್ಲಿಯ ತನಕ ದುಆ ತನ್ನ ಪೂರ್ಣ ಪ್ರಭಾವವನ್ನು ತೋರಿಸುವುದಿಲ್ಲವೋ ಅಲ್ಲಿಯ ತನಕ ಹಿಂದೆ ಸರಿಯಬಾರದು. ಸುಸ್ತಾಗುವ ಮತ್ತು ಗಾಬರಿಗೊಳ್ಳುವ ಜನರು ತಪ್ಪು ಮಾಡುತ್ತಾರೆ. ಏಕೆಂದರೆ ಅದು ಅನುಗ್ರಹದಿಂದ ವಂಚಿತಗೊಳ್ಳುವುದರ ಲಕ್ಷಣವಾಗಿದೆ.

(ಹುಝೂರ್ ಹೇಳಿದರು:) ಅಲ್ಲಾಹನು ವಿಶೇಷವಾಗಿ ಈ ಅನುಗ್ರಹೀತ ತಿಂಗಳನ್ನು ನಮಗಾಗಿ ಒದಗಿಸಿ ಕೊಟ್ಟಿರುವ ಈ ದಿನಗಳಲ್ಲಿ ನಾವು ನಮ್ಮೊಳಗೆ ಪರಿಶುದ್ಧವಾದ ಬದಲಾವಣೆಯನ್ನು ಉಂಟುಮಾಡುತ್ತಾ ದುಆಗಳ ಕಡೆಗೆ ಗಮನಹರಿಸಬೇಕಾಗಿದೆ. ಇದೇ ನಮ್ಮ ಇಹಲೋಕ ಮತ್ತು ಪರಲೋಕವನ್ನು ಸುಂದರಗೊಳಿಸಲು ಇರುವ ಮಾರ್ಗವಾಗಿದೆ. ರಮಝಾನಿನ ಈ ಕೊನೆಯ ದಿನಗಳಲ್ಲಿ ವಿಶೇಷವಾಗಿ ನಾವು ಅಲ್ಲಾಹನ ಆಜ್ಞೆಗಳನ್ನು ನಮ್ಮ ಮಾರ್ಗಸೂಚಿಯನ್ನಾಗಿ ಮಾಡಿಕೊಂಡು ವಿಶ್ವಾಸವನ್ನು ಸುದೃಢಗೊಳಿಸುತ್ತಾ ರಾತ್ರಿ ಸಮಯದಲ್ಲಿ ಎದ್ದು ಅಲ್ಲಾಹನ ಮುಂದೆ ಬಾಗಿ ಅವನ ಸಾಮೀಪ್ಯವನ್ನು ಗಳಿಸಲು ಪ್ರಯತ್ನಿಸಬೇಕು.

(ಕೊನೆಗೆ ಹುಝೂರ್ ಹೇಳಿದರು:) ರಮಝಾನಿನ ದುಆಗಳಲ್ಲಿ ವಿಶೇಷವಾಗಿ ಜಮಾಅತಿನ ಪ್ರಗತಿಗಾಗಿ ದುಆಗಳನ್ನು ಮಾಡಿರಿ, ದೀನಿಗಾಗಿ ಸೆರೆಯಲ್ಲಿರುವವರಿಗಾಗಿ ದುಆಗಳನ್ನು ಮಾಡಿರಿ. ಅವರು ಬೇಗನೇ ಬಿಡುಗಡೆಗೊಳ್ಳುವಂತೆ ಅಲ್ಲಾಹನು ಮಾಡಲಿ. ಯಮನಿನ ಸೆರೆಯಾಳುಗಳಿಗಾಗಿ ದುಆ ಮಾಡಿರಿ. ಅಲ್ಲಿ ಮಹಿಳೆಯೊಬ್ಬಳನ್ನು ಜೈಲಿನಲ್ಲಿ ದೌರ್ಜನ್ಯಕರವಾಗಿ ಒಂದು ಇಕ್ಕಟ್ಟಾದ ಕೊಠಡಿಯಲ್ಲಿ ಇರಿಸಲಾಗಿದೆ. ಆದರೆ ಆಕೆ ಬಹಳ ಸಹನೆ ಮತ್ತು ಸುದೃಢವಾದ ವಿಶ್ವಾಸದೊಂದಿಗೆ ಅಲ್ಲಿ ಇದ್ದಾರೆ. ವಿಶೇಷವಾಗಿ ಅವರಿಗಾಗಿಯೂ ದುಆ ಮಾಡಿರಿ. ಅವರು ಬೇಗನೇ ಬಿಡುಗಡೆಗೊಳ್ಳುವಂತೆ ಅಲ್ಲಾಹನು ಮಾಡಲಿ. ಜಮಾಅತಿನ ಕುರಿತು ಅಲ್ಲಿನ ವಿರೋಧಿಗಳ ಹೃದಯಗಳಲ್ಲಿ ಇರುವ ತಪ್ಪುಗ್ರಹಿಕೆಯನ್ನು ಅಲ್ಲಾಹನು ದೂರೀಕರಿಸಲಿ. ಪೆಲಸ್ತೀನಿಯರನ್ನು ಸಹ ದುಆಗಳಲ್ಲಿ ನೆನಪಿಡಿರಿ. ಬಹಳ ಬದಲಾವಣೆ ಉಂಟಾಗಿದೆ ಎಂದು ಬಾಹ್ಯವಾಗಿ ಹೇಳಲಾಗುತ್ತದೆ. ಆದರೆ ಸ್ಥಿತಿಗತಿಗಳು ಇನ್ನಷ್ಟು ಹದಗೆಡುತ್ತಿವೆ. ವಿಶ್ವಸಂಸ್ಥೆಯ ರೆಸೊಲ್ಯೂಶನ್ ಪಾಸ್ ಆಗಿಯೂ ಈ ದೌರ್ಜನ್ಯ ಅದೇ ರೀತಿಯಲ್ಲಿ ಮುಂದುವರೆದಿದೆ. ಒಟ್ಟಿನಲ್ಲಿ ಪ್ರಾರ್ಥನೆಯನ್ನೇ ಮಾಡಬೇಕಾಗಿದೆ. ಅಲ್ಲಾಹನು ಈ ಪೀಡಿತರನ್ನು ಈ ದೌರ್ಜನ್ಯಗಾರರಿಂದ ರಕ್ಷಿಸಲಿ. ಈ ಪೀಡಿತರಿಗಾಗಿ ಯಥಾರ್ಥವಾದ ದುಆವನ್ನು ಮಾಡಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***

*At, **'Masjid Mubarak'**, Islamabad, Tilford, UK.* On 29-03-2024

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email****:* *khutuba.kannada@gmail.com*

**You can find all the Sermons archived at**: www.alislam.org/friday-sermon